**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.684/2014**

**ಪಿ.ಡಬ್ಲ್ಯೂಃ 12**

**ಸಿ.ಡಬ್ಲ್ಯೂಃ 12**

ಸಾಕ್ಷಿದಾರರ ಹೆಸರು ಃ ಅಬ್ದುಲ್ ಸತ್ತಾರ್

ತಂದೆಯ ಹೆಸರು ಃ ಖಲಂದರ್ ಖಾನ್

ವಯಸ್ಸು ಃ 34 ವರ್ಷ

ಉದ್ಯೋಗ ಃ ವ್ಯವಸಾಯ

ವಾಸಸ್ಥಳ ಃ ಬಾವಿಕೆರೆ

**ದಿನಾಂಕಃ 10-12-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ಬಾವಿಕೆರೆಯ ಸರ್ವೆ ನಂಃ 7ರಲ್ಲಿ ನಮ್ಮ ಮನೆ ಇರುತ್ತದೆ. ನಮ್ಮ ಮನೆಯ ಪಕ್ಕದಲ್ಲಿ ಸರ್ಕಾರಿ ಜಾಗ ಇದ್ದು, ಸದರಿ ಜಾಗಕ್ಕೆ ಸರ್ಕಾರದವರು ಕಾಂಪೌಂಡ್ ಹಾಕಿರುತ್ತಾರೆ. ಸದರಿ ಜಾಗವನ್ನು ಆರೋಪಿತರು ಅಕ್ರಮವಾಗಿ ಹೊಡೆದುಕೊಂಡಿರುತ್ತಾರೆಂದು ಆರೋಪಿ ರಾಮಯ್ಯನವರು ಪಂಚಾಯ್ತಿ ಕಾರ್ಯದರ್ಶಿ ಇದ್ದು, ಅಸೆಸ್ ಮೆಂಟಿನಲ್ಲಿ ಹೆಚ್ಚುವರಿಯಾಗಿ ಹೆಸರನ್ನು ಸೇರಿಸಿರುತ್ತಾರೆಂದು ಈಗ್ಗೆ ಸುಮಾರು 4, 5 ವರ್ಷಗಳ ಹಿಂದೆ ಮಃ 12-00 ಗಂಟೆ ಸಮಯದಲ್ಲಿ ಕೃಷಿ ಇಲಾಖೆಗೆ ಸೇರಿದ ಜಾಗಕ್ಕೆ ಗ್ರಾಮ ಲೆಕ್ಕಾಧಿಕಾರಿ ಜಗದೀಶ್ ಹಾಗೂ ಇತರೇ 6-7 ಜನರು ಬಂದು ಮಹಜರಿಗೆ ನನ್ನ ಸಹಿ ಪಡೆದುಕೊಂಡರು. ನಿಪಿ-4ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸದರಿ ಸಾಕ್ಷಿ ಸಹಿಯನ್ನು ನಿಪಿ-4(ಡಿ) ಎಂದು ಗುರುತಿಸಲಾಯ್ತು. ಸದರಿ ಮಹಜರಿನಲ್ಲಿರುವ ವಿಷಯಗಳ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮಹಜರಿಗೆ ರವಿ ರವರು ಸಹಿ ಮಾಡಿರುತ್ತಾರೆ.

**ಪಾಟೀಸವಾಲು ಃ 1ನೇ ಆರೋಪಿ ಪರ ಶ್ರೀ ಎಸ್ ಪಿ ವಕೀಲರಿಂದ.**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾನು ಸಹಿ ಮಾಡಿದ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಮುಂದೆ ಯಾವುದೇ ರೀತಿಯ ಬರವಣಿಗೆ ಮಾಡಿಲ್ಲ ಎಂದರೆ ಸರಿ. ಸರ್ಕಾರಿ ಜಾಗದ ಸರ್ವೆ ನಂಬರ್ ಅಥವಾ ಅಸೆಸ್ ಮೆಂಟ್ ನಂಬರ್ ನನಗೆ

ಗೊತ್ತಿಲ್ಲ ಎಂದರೆ ಸರಿ. ನಾನು ಸಹಿ ಮಾಡಿದ ಕಾಲಕ್ಕೆ ಬೇರೆ ಯಾರು ಸಹಿ ಮಾಡಿದರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಜಮೀನು ವಿಚಾರಕ್ಕೆ ಸಹಿ ಮಾಡಿದ ಎಂದಿದ್ದಕ್ಕೆ ಅವರ ಒತ್ತಾಯಕ್ಕೆ ನಾನು ಸಹಿ ಹಾಕಿರುತ್ತೇನೆಂದರೆ ಸರಿ. ನಾನು ಸಹಿಯನ್ನು ನನ್ನ ಮನೆಯ ಹತ್ತಿರ ಮಾಡಿರುತ್ತೇನೆ. ಬೇರೆ ಎಲ್ಲೂ ಹೋಗಿರುವುದಿಲ್ಲ.

*(2 ನೇ ಆರೋಪಿ ಪರ ವಕೀಲರು ಮೇಲ್ಕಂಡ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲು ಪ್ರಾರ್ಥಿಸಿರುತ್ತಾರೆ. ಆದ್ದರಿಂದ ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲಾಯ್ತು)*

**ಮರುವಿಚಾರಣೆ:** ಇರುವುದಿಲ್ಲ.

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಕೇ. ಸ. ಇ. ಎ. ಒ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.